ಶ್ರೀ ಬಿ. ವಿ. ಕಕ್ಕಿಲಾಯ.—ಸ್ಯಾಮಿ, ಹಿಂದೂಸ್ಥಾನ್ ಮೆಷಿನ್ ಟೂಲ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಅವರು ಕಾಗದ ಪತ್ರಗಳನ್ನು 1968ರಲ್ಲೇ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅಲ್ಲದೇ ಇನ್ನೊಂದು ಸಂಘದವರೂ ಕೂಡ ಕಳುಹಿಸಿದ್ದಾರೆ. ಅದರ ಮೇಲೆ ಇದುವರೆಗೆ ಏನು ಕಾರ್ಯ ಕ್ರಮ ತೆಗೆದುಕೊಂಡಿದ್ದೀರಿ ?

†ಶ್ರೀ ಅಜೀಜ್ ಸೇಟ್.—ಆ ವಿಷಯ 1968ರಲ್ಲೇ ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಾನ್ ಬಿ. ವಿ. ಕಕ್ಕಿಲ್ಲಾಯರವರು ಕೇಳಿದ್ದು ಏನೆಂದರೆ, 1968ರಲ್ಲೇ ಆ ಸಂಘದವರು ಸಂಬಂಧಪಟ್ಟ ಕಾಗದ ಪತ್ರಗಳನ್ನು ಸರ್ಕಾರಕ್ಕೆ ಕಳುಹಿಸಿದ್ದರೂ ಕೂಡ ಇನ್ನೂ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ. ಏತಕ್ಕಾಗಿ ನಾಲ್ಕು ವರ್ಷಗಳಾದರೂ ಇನ್ನೂ ವರೆಗೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ! ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

Sri AZEEZ SAIT.—The matter was referred to the Industrial Relations Implementation Evaluation Committee. The Committee has not met from January 1972. As soon as the Committee meets, the matter will be taken into consideration.

Sri M. S. KRISHNAN.—When did this Implementation and Evaluation Committee come to know of the report of the Government. ?

Sri AZEEZ SAIT.—The matter was further considered by the above said committee, which was held on 6th July 1971. It was said that the matter may be further enquired into. Accordingly the Deputy Labour Commissioner issued a letter by registered post dated 14th December 1971 and the Deputy Labour Commissioner submitted a final report on 21st January 1972 and the entire position regarding the grant of recognition is proposed to be placed before the State Industrial Relations Implementation Committee at its next meeting.

Sri M. S. KRISHNAN.—When the State Industrial Relations Committee got seized of the matter on 6th December 1971, why is it that it was not decided till today ?

Sri AZEEZ SAIT.—They wanted a further report at the Deputy Labour Commissioner was asked to go into the matter. The final report was received on 21st January 1972. But what has happened is the Committee could not considered it because there was no meeting of the committee since January 1972. Now the Committee has been reconstituted and the matter would be taken into consideration.

Sri M. S. KRISHNAN.—When can we expect this committee to meet and take a decision ?

Sri AZEEZ SAIT.—The moment the Committee meets, it will take this into consideration and take a decision.

Rural Electrification in Buntwal Taluk

679. **Sri B. V. KAKKILAYA** (Buntwal):

Will the Minister for Public Works and Electricity be pleased to state :—

(*a*) whether Buntwal Taluk in South Kanara District is declared to be maidan area for purposes of rural electrification ;

(*b*) the criteria for declaring an area as "Maidan" or "Malnad";

((*c*) the difference between the percentage of minimum return that the Department considers necessary in Maidan area and Malnad area for undertaking any rural electrification work;

(*d*) whether the Government has received any representation for extending electricity lines to rural areas in Buntwal Taluk and, if so, the action taken in this behalf?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The following factors are taken into consideration while classifying an area as "Malnad" or "Maidan.

(1) Physio-agronomic characteristics including rain-fall.
(2) percentage of cultivated area, etc.
(3) Rural density of population *vis-a-vis* the State average rural density and the like.

(*c*) The prescribed percentage of minimum return by the Board for rural electrification works is 5 per cent for Malnad area and 7½ per cent for Maidan area, the difference being 2½ per cent.

(*d*) No.

ಶ್ರೀ ಬಿ. ವಿ. ಕಕ್ಕಿಲಾಯ.—ಮಳೆಯ ಪ್ರಮಾಣ, ಗ್ರಾಮೀಣ ಜನದಟ್ಟಣೆ ಮುಂತಾದ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಮಲೆನಾಡು ಅಥವಾ ಮೈದಾನ ಪ್ರದೇಶ ಎಂಬುದಾಗಿ ತೀರ್ಮಾನ ಮಾಡಿರುವುದಾಗಿ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳದ ಹಾಗೆಯೇ ಪುತ್ತೂರು, ಬೆಳ್ತಂಗಡಿ, ಕುಂದಾಪುರ, ಸುಳ್ಯ ಮುಂತಾದ ತಾಲ್ಲೂಕುಗಳು ಮಲೆನಾಡು ತಾಲ್ಲೂಕುಗಳು ಎಂದು ಹೇಳುವಾಗ ಅಷ್ಟೇ ಗುಡ್ಡಗಳು, ಕಣಿವೆಗಳು ಇರುವಂಥ ಈ ಪ್ರದೇಶ ಗಳನ್ನು ಮೈದಾನ ಎಂದು ತೀರ್ಮಾನ ಮಾಡುವುದಕ್ಕೆ ಏನು ಕಾರಣ ಎಂದು ತಿಳಿಸುತ್ತಾರೆಯೇ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೇ ಒಂದು ಕಾರಣವನ್ನು ತೆಗೆದುಕೊಂಡು ಮಲೆ ನಾಡು, ಮೈದಾನ ಎಂದು ತೀರ್ಮಾನ ಮಾಡಿಲ್ಲ. ಇಡೀ ರಾಜ್ಯದಲ್ಲಿ ಎಲ್ಲ ಜಿಲ್ಲೆಗಳಲ್ಲಿಯೂ ಕೆಲವು ಅಂಕ ಅಂಶಗಳು ಮತ್ತು ಪರಿಸ್ಥಿತಿಗಳನ್ನು ಗಮನಕ್ಕೆ ತೆಗೆದುಕೊಂಡು ಇಂಥಿಂಥ ಜಿಲ್ಲೆಯಲ್ಲಿ ಇಂಥಿಂಥ ಭಾಗ ಮಲೆನಾಡು, ಇಂಥಿಂಥ ಭಾಗ ಮೈದಾನ ಎಂದು ತೀರ್ಮಾನ ಮಾಡಿದೆ. ಯಾವುದೇ ಒಂದು ಕಾರಣದಿಂದ ಒಂದರಲ್ಲಿ ಒಂದು ಹೆಚ್ಚು ಇದ್ದು ಇನ್ನೊಂದರಲ್ಲಿ ಅದು ಕಡಮೆ ಇರಬಹುದು. ಸಮಗ್ರವಾಗಿ ಇಲ್ಲ ಕೊಟ್ಟಿರತಕ್ಕ ಎಲ್ಲ ಕಾರಣಗಳನ್ನೂ ತೆಗೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಡುಪಿ ಮತ್ತು ಬಂಟ್ವಾಳ್ ತಾಲ್ಲೂಕುಗಳನ್ನು ಬಿಟ್ಟು ಉಳಿದ ತಾಲ್ಲೂಕುಗಳು ಮಲೆನಾಡು ಎಂದು ತೀರ್ಮಾನ ಮಾಡಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಬಂಟ್ವಾಳ ತಾಲ್ಲೂಕಿಗೂ, ಮಂಗಳೂರು ಮತ್ತು ಉಡುಪಿ ತಾಲ್ಲೂಕಿಗೂ ಬಹಳ ವ್ಯತ್ಯಾಸವಿದೆ. ಬಂಟ್ವಾಳ ಮತ್ತು ಬೆಳ್ತಂಗಡಿ ತಾಲ್ಲೂಕುಗಳಿಗೆ ಬಹಳ ಸಾಮ್ಯವಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ತೀರ್ಮಾನ ಮಾಡಿದೆ ಎಂದು ಹೇಳಿದೆ. ಒಂದೊಂದು ಐಟಂ ತೆಗೆದುಕೊಂಡರೆ ಒಂದರಲ್ಲಿ ಒಂದಕ್ಕೆ ಮೈದಾನ ಎನ್ನುವುದಕ್ಕೆ ಕಾರಣವಿರಬಹುದು, ಇನ್ನೊಂದು ಐಟಂ ತೆಗೆದುಕೊಂಡರೆ ಮಲೆನಾಡು ಎನ್ನುವುದಕ್ಕೆ ಕಾರಣವಿರಬಹುದು. ಆದ್ದರಿಂದ ಸಮಗ್ರವಾಗಿ ತೆಗೆದುಕೊಂಡು ಯೋಚನೆ ಮಾಡಿ ತೀರ್ಮಾನ ಮಾಡಿದೆ.

ಶ್ರೀ ಬಿ. ವಿ. ಕಕ್ಕಯ್ಯಾಮು.—ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಮನವಿಗಳು ಬಂದಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಅನೇಕ ಗ್ರಾಮಗಳವರ ಮನವಿಗಳನ್ನು ನಾವೇ ತಮ್ಮ ಅಧಿಕಾರಿಗಳ ವಶಕ್ಕೆ ಕೊಟ್ಟಿದ್ದೇನೆ ಮತ್ತು ಅವರು ಏಳೂವರೆ ಪರ್ಸೆಂಟ್ ಅದಾಯ ಬಾರದೆ, ಖರ್ಚು ಜಾಸ್ತಿಯಾಗುವುದರಿಂದ ಈಗ ವಿದ್ಯುಚ್ಛಕ್ತಿಯನ್ನು ಕೊಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದನ್ನು ಪರಿಶೀಲಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳಿತಕ್ಕ ವಿಚಾರ ಇನ್ನೂ ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ರಾಜ್ಯದ ಸರಾಸರಿ ಗ್ರಾಮೀಣ ಜನವಟ್ಟಣಿಯೊಂದಿಗೆ ಹೋಲಿಸಿದಲ್ಲಿ ಅಲ್ಲಿನ ಗ್ರಾಮೀಣ ಜನಸಂಖ್ಯೆ ಎಂದು ಹೇಳಿದ್ದಾರೆ. ಮರೆನಾಡು ಎಂದು ತೀರ್ಮಾನ ಮಾಡುವುದಕ್ಕೆ ಇದು ಹೇಗೆ ಸಹಾಯಕವಾಗುತ್ತದೆ ಎನ್ನುವುದನ್ನು ತಿಳಿಸುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಬಹಳ ವಿವರವಾದ ಉತ್ತರವಾಗುತ್ತದೆ. ಆದರೂ ಹೇಳುತ್ತೇನೆ. ರೂರಲ್ ಡೆನ್ಸಿಟಿ ಎನ್ನುವುದು ಒಂದು ಕಾರಣ. ಡೆನ್ಸಿಟಿ ಆಫ್ ಪಾಪ್ಯುಲೇಷನ್ ಕಡಮೆ ಇರುವುದು ಸಾಮಾನ್ಯವಾಗಿ ಬೆಟ್ಟ ಮತ್ತು ಕಾಡು ಜಾಸ್ತಿ ಇರುವ ಕಡೆ. ಆದ್ದರಿಂದ ಮರೆನಾಡು ಎನ್ನುವುದಕ್ಕೆ ಜನಸಂದಣಿ ಕಡಮೆ ಇರುವ ಪ್ರದೇಶ ಎಂದು ತೆಗೆದುಕೊಳ್ಳಬಹುದು. ನಾನು ಆಗಲೇ ಹೇಳಿದ ಹಾಗೆ ಇದೊಂದೇ ಕಾರಣವನ್ನು ತೆಗೆದುಕೊಂಡು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಎಲ್ಲ ವಿಷಯಗಳನ್ನೂ ಸಮಗ್ರವಾಗಿ ಅನ್ವಯಿಸಿ, ಇಡೀ ಮೈಸೂರು ರಾಜ್ಯದಲ್ಲಿ ಯಾವ ಭಾಗವನ್ನು ಮರೆನಾಡು ಎಂದು ಪರಿಗಣಿಸಬಹುದು, ಯಾವ ಭಾಗವನ್ನು ಆ ರೀತಿ ಪರಿಗಣಿಸಕೂಡದು ಎನ್ನುವ ತೀರ್ಮಾನಕ್ಕೆ ಬಂದಿದೆ. ಇದು ಶಾಶ್ವತವಾದುದಲ್ಲ. ಆಗಿಂದಾಗ್ಗೆ ಬದಲಾವಣೆಯಾಗುತ್ತಿರುತ್ತದೆ. ಮತ್ತೊಂದು ಸಲ ಪರಿಶೀಲನೆ ಮಾಡಿದಾಗ ಈಗ ಮರೆನಾಡು ಅನ್ನಿಸಿಕೊಂಡಿರುವ ಭಾಗಗಳು ಮರೆನಾಡು ಆಗದೆ ಇರಬಹುದು.

Medical Contribution from Taluk Development Boards

686. Sri G. PUTTASWAMY (Mudigere).—

Will the Minister for Community Development and Social Welfare be pleased to state :—

(*a*) the names of the Taluk Development Boards in the State which have not paid the arrears of Medical Contribution due to Government regularly ;

(*b*) the arrears of Medical Contribution outstanding from the Taluk Boards as on 31st March 1972 ;

(*c*) whether it has come to the notice of Government that the Taluk Boards are experiencing difficulty in payment of arrears of medical contribution ; if so, the steps proposed to be taken to give relief to the Taluk Board ?

Sri M. MALLIKARJUNA SWAMY (Minister for Community Development and Social Welfare).—

(*a*) List appended.

(*b*) Rs. 1,72,80,324-06.

(*c*) Yes. Government have considered the difficulties of the Taluk Development Boards and granted them the facility of peyment in ten equal instalments spreading over for a period of 10 years.